
# ನೂರರ ನೆನಪಿನಲ್ಲಿ





**ಮೈಸೂರು ವಿ ರಾಮರತ್ನಂ (1917–2008)**

ವಿದ್ವಾನ್ ಮೈಸೂರು ವಿ ರಾಮರತ್ನಂ ಉತ್ತಮ ಸಂಗೀತಗಾರರು, ಲೇಖಕರು, ಗುರುಗಳು ಹಾಗೂ ವಾಗ್ಗೇಯಕಾರರು. ಸಂಗೀತರತ್ನ ಪಿಟೀಲು ಟಿ ಚೌಡಯ್ಯನವರ ಶಿಷ್ಯರು. ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ಸಂಗೀತ ಕಾರ್ಯಕ್ರಮ ನೀಡಿದ್ದರು. ಚೌಡಯ್ಯನವರು ಸ್ಥಾಪಿಸಿದ ಅಯ್ಯನಾರ್ ಶಾಲೆಯಲ್ಲಿ ಉಪ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದರು. ನಂತರ ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಹಲವಾರು ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿಗೆ ಮಾರ್ಗದರ್ಶನ ನೀಡಿದ್ದಾರೆ. ರಾಮ ಎನ್ನುವ ಅಂಕಿತದಲ್ಲಿ ಹಲವು ಕೃತಿಗಳನ್ನು ರಚಿಸಿದ್ದಾರೆ. ಸಂಗೀತವನ್ನು ಕುರಿತಂತೆ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

ಸಂಗೀತ ಕಲಾರತ್ನ, ಸಂಗೀತ ಕಲಾಸಾಗರ ಮೊದಲಾದ ಬಿರುದುಗಳನ್ನು ಪಡೆದಿದ್ದಾರೆ.

**ಎಸ್ ರಾಮನಾಥನ್ (1917–1988)**

ಎಸ್ ರಾಮನಾಥನ್ ಪ್ರಖ್ಯಾತ ಕರ್ನಾಟಕ ಸಂಗೀತ ಕಲಾವಿದರು ಹಾಗೂ ಸಂಗೀತಜ್ಞರು. ಟೈಗರ್ ವರದಾಚಾರ್ಯ, ಸಭೇಶ ಅಯ್ಯರ್, ಪೊನ್ನಯ್ಯ ಪಿಳ್ಳೈ, ಸಾತ್ತೂರು ಕೃಷ್ಣ ಅಯ್ಯಂಗಾರ್ ಮುಂತಾದವರ ಬಳಿ ಸಂಗೀತ ಅಭ್ಯಾಸ ಮಾಡಿದ್ದಾರೆ. ವೆಸ್ಲಿಯನ್ ವಿಶ್ವವಿದ್ಯಾನಿಲಯದಲ್ಲಿ ಎತ್ನೊ ಮ್ಯುಸಿಕಾಲಜಿಯಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದರು. ಅಲ್ಲೇ ಅಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ.

ಅವರು ಹಲವಾರು ವರ್ಣಗಳು ಹಾಗೂ ಕೃತಿಗಳನ್ನು ರಚಿಸಿದ್ದಾರೆ. 1985ರಲ್ಲಿ ಸಂಗೀತ ಕಲಾನಿಧಿ ಪ್ರಶಸ್ತಿಗೆ ಭಾಜನರಾದರು. ಅವರ ಹಲವಾರು ಧ್ವನಿ ಸುರುಳಿಗಳು ಬಿಡುಗಡೆಯಾಗಿವೆ.

ಪಿ ಉನ್ನಿಕೃಷ್ಣನ್, ಎಸ್ ಸೌಮ್ಯ, ಸೀತಾ ನಾಗರಾಜನ್, ಗೀತಾ ಬೆನೆಟ್ (ಅವರ ಮಗಳು), ವಿದ್ಯಾಹರನ್ ಹೀಗೆ ಹಲವು ಖ್ಯಾತರು ಅವರ ಶಿಷ್ಯರು.

ಆಗಸ್ಟ್ ಶುಕ್ರವಾರ **25** AUGUST FRIDAY

**ಎಸ್ ಪಿ ವಿ ಜಿ ಎಂ ಸಿ ಟ್ರಸ್ಟ್**
**56ನೇ ಪಾರಂಪರಿಕ ಸಂಗೀತೋತ್ಸವ**
**ಹತ್ತು ದಿನಗಳ ಸಂಗೀತ ಕಾರ್ಯಕ್ರಮಗಳು**
**ಉದ್ಘಾಟನೆ**

**ಸಂಜೆ 6:45ಕ್ಕೆ**

ಪಂಡಿತ್ ರೋಣು ಮಜುಂದಾರ್– ಬಾನ್ಸುರಿ
ಪಂಡಿತ್ ದುರ್ಗಾಪ್ರಸಾದ್ ಮಜುಂದಾರ್– ಪಖಾವಜ್
ಪಂಡಿತ್ ಪೃಥ್ವಿರಾಜ್ ಮಿಶ್ರ– ತಬಲ

**6 : 45 p.m.**

Pandit Ronu Majumdar-Bansuri
Pandit Durgaprasad Majumdar-Pakhawaj
Pandit Prithviraj Mishra-Tabla



ರೋಣು ಎಂದೇ ಜನಪ್ರಿಯರಾಗಿರುವ ರೋಣು ಮಜುಂದಾರ್ ತಮ್ಮ ತಂದೆ ಡಾ. ಭಾನು ಮಜುಂದಾರ್ ಅವರಲ್ಲಿ ಗಾಯನವನ್ನು, ನಂತರ ಪಂಡಿತ್ ಲಕ್ಷಣ್ ಪ್ರಸಾದ್ ಜೈಪುರವಾಲೆ ಅವರಲ್ಲಿ ಬಾನ್ಸುರಿಯನ್ನು ಕಲಿತರು. ಮುಂದೆ ಪಂಡಿತ್ ವಿಜಯರಾಘವ ರಾವ್ ಅವರಲ್ಲಿ ಕಲಿಕೆಯನ್ನು ಮುಂದುವರೆಸಿ ಇಂದು ಪ್ರಖ್ಯಾತ ಸಂಗೀತಗಾರರಾಗಿ ರೂಪುಗೊಂಡಿದ್ದಾರೆ. ವಿಶ್ವದಾದ್ಯಂತ ಹಲವಾರು ಪ್ರತಿಷ್ಠಿತ ಸಭೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಬೆಲಾ ಫ್ಲೆಕ್ ಜೊತೆ ತಂದಿರುವ ಆಲ್ಬಂ ಗ್ರಾಮಿ ನಾಮಿನೇಷನ್ ಪಡೆದಿತ್ತು. 30ಕ್ಕೂ ಹೆಚ್ಚು ಧ್ವನಿಸುರುಳಿಗಳನ್ನು ಹೊರತಂದಿರುವ ಇವರು ಆದಿತ್ಯ ಬಿರ್ಲಾ ಪ್ರಶಸ್ತಿಗೂ ಪಾತ್ರರು. ಇವರ ಹಲವಾರು ಜುಗಲ್‌ಬಂದಿ ಕಾರ್ಯಕ್ರಮಗಳು ತುಂಬಾ ಜನಪ್ರಿಯವಾಗಿದೆ. ಇತರ ಸಂಗೀತ ಪ್ರಕಾರಗಳ ಜೊತೆಗೆ ಅದರಲ್ಲೂ ವಿಶೇಷವಾಗಿ ಪಾಶ್ಚಾತ್ಯ ಸಂಗೀತದ ಜೊತೆಗೆ ಹಲವು ಫ್ಯೂಷನ್ ಸಂಯೋಜನೆಗಳನ್ನು ಮಾಡಿದ್ದಾರೆ. ಇತ್ತೀಚೆಗೆ 5378 ಕೊಳಲುವಾದಕರ ಜೊತೆ ಹಮ್ಮಿಕೊಂಡ ವೇಣು ನಾದ್ ಗಿನ್ನಿಸ್ ದಾಖಲೆಯಾಗಿದೆ.



ಆಗಸ್ಟ್ ಶನಿವಾರ **26** AUGUST FRIDAY

ಸಮಯ : ಸಂಜೆ 5:30ರಿಂದ 6.45 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಅರಣ್ಯಪರ್ವ, ಕೃಷ್ಣ ಸಂದರ್ಶನ
ವಾಚನಕಾರರು : ವಿದ್ವಾನ್ ಮತ್ತೂರು ಕುಮಾರಸ್ವಾಮಿ
ವ್ಯಾಖ್ಯಾನಕಾರರು : ವಿದ್ವಾನ್ ಮಧುಸೂಧನ ಅಡಿಗ, ನಾಗಮಂಗಲ

**ಸಂಜೆ 6:45ಕ್ಕೆ**

ವಿದ್ವಾನ್ ಕೃಷ್ಣಮೋಹನ್
ವಿದ್ವಾನ್ ರಾಂಕುಮಾರ್ ಮೋಹನ್–ದ್ವಂದ್ವ ಹಾಡುಗಾರಿಕೆ
ವಿದ್ವಾನ್ ಬಿ ಅನಂತಕೃಷ್ಣನ್ –ವಯೋಲಿನ್
ವಿದ್ವಾನ್ ತ್ರಿಚೂರ್ ಆರ್ ಮೋಹನ್ -ಮೃದಂಗ
ವಿದ್ವಾನ್ ವೆಂಕಟಸುಬ್ರಮಣಿಯನ್ –ಘಟ

**6 : 45 p.m.**

Vidwan Krishna Mohan-Vocal
Vidwan Ramkumar Mohan-Vocal?
Vidwan B Ananthakrishnan-Violin
Vidwan Trichur R Mohan -Mridangam
Vidwan Venkatasubramaniam-Ghatam



ತ್ರಿಚೂರ್ ಸಹೋದರರು ಎಂದೇ ಖ್ಯಾತರಾಗಿರುವ ಶ್ರೀ ಕೃಷ್ಣಮೋಹನ್ ಹಾಗೂ ಶ್ರೀ ರಾಂಕುಮಾರ್ ಮೋಹನ್ ಹಿರಿಯ ಮೃದಂಗ ವಿದ್ವಾಂಸ ಶ್ರೀ ತ್ರಿಚೂರ್ ಮೋಹನ್ ಅವರ ಪುತ್ರರು. ಮೊದಲಲ್ಲಿ ಶ್ರೀಮತಿ ಬಾಲಮಣಿ ಈಶ್ವರ್, ನಂತರದಲ್ಲಿ ನೆಯ್ಯಂಟಿಕರ ಮೋಹನಚಂದ್ರನ್ ಅವರಲ್ಲಿ ಕಲಿತು ಈಗ ಪದ್ಮಭೂಷಣ ಶ್ರೀ ಪಿ ಎಸ್ ನಾರಾಯಣಸ್ವಾಮಿಯವರಲ್ಲಿ ಕಲಿಯುತ್ತಿದ್ದಾರೆ. ತಂದೆಯವರ ಪ್ರಭಾವದಿಂದ ಲಯದ ಮೇಲೆ ಹಿಡಿತ ಸಾಧ್ಯವಾಗಿದೆ. ಸಂಪ್ರದಾಯಶುದ್ಧವಾದ, ಭಾವಪೂರ್ಣವಾದ ಪ್ರಸ್ತುತಿಗೆ ಈ ಸಹೋದರರು ಹೆಸರುವಾಸಿ. ಸಹೋದರರಿಬ್ಬರೂ ಒಬ್ಬರಾದ ನಂತರ ಮತ್ತೊಬ್ಬರು ಸುದೀರ್ಘವಾದ ಹಾಗೂ ಚುಟುಕಾದ ಸಂಗತಿಗಳನ್ನು ಹಾಡುತ್ತಾ, ರಾಗವನ್ನು ವಿಸ್ತರಿಸುವ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದಾರೆ. ಇಂತಹ ವಿಶಿಷ್ಟ ಹಾಗೂ ಪ್ರಭಾವಶಾಲಿ ಆಲಾಪನಾ ಶೈಲಿ ಹಿಂದಿನ ಯುಗಳ ಗಾಯಕರ್‍ಯಾರಲ್ಲೂ ಕಂಡುಬರುವುದಿಲ್ಲ ಎನ್ನುವುದು ಹೆಚ್ಚಿನ ಖ್ಯಾತ ವಿಮರ್ಶಕರ ಅಭಿಪ್ರಾಯ.

**ಸತ್ಯನಾರಾಯಣಪೂಜೆ ಬೆಳಗ್ಗೆ 10:00**

ಸಂಜೆ 5:30ರಿಂದ 6:45 ಕುಮಾರವ್ಯಾಸ ಭಾರತ ವಾಚನ, ಅರಣ್ಯ ಪರ್ವ
ವ್ಯಾಖ್ಯಾನ ವಿಷಯ : ಜಂಬೂಫಲ ವೃತ್ತಾಂತ
ವಾಚನಕಾರರು : ವಿದ್ವಾನ್ ಸುರೇಶ್‌ರಾವ್ ಅತ್ತೂರು, ಭದ್ರಾವತಿ
ವ್ಯಾಖ್ಯಾನಕಾರರು : ವಿದ್ವಾನ್ ಜಿ ಎಸ್ ಮಂಜುನಾಥ್

**ಸಂಜೆ 6:45ಕ್ಕೆ**

ವಿದ್ವಾನ್ ವಿಜಯ ಶಿವ–ಗಾಯನ
ವಿದ್ವಾನ್ ಪ್ರಭಾತ್ ಗೋಖಲೆ ಹಾಗೂ
ಪ್ರಮೋದ್ ಗೋಖಲೆ– ಗಾಯನ ಸಹಕಾರ
ವಿದ್ವಾನ್ ತ್ರಿವೇಂಡ್ರಂ ಸಂಪತ್–ವಯೋಲಿನ್
ವಿದ್ವಾನ್ ಭರದ್ವಾಜ್– ಮೃದಂಗ್
ವಿದ್ವಾನ್ ವ್ಯಾಸ ವಿಠಲ– ಖಂಜಿರಾ

**6 : 45 p.m.**

Vidwan Vijaya Siva-Vocal
Vid Prabhath Gokhale -
Vid Pramod Gokhale-Vocal support
Vidwan Trivandrum Sampath-Violin?
Vidwan N.C.Bharadwaj-Mridangam?
Vidwan Vyasa Vittala-Khanjeera



ವಿಜಯ ಶಿವ ನಾಲ್ಕನೇ ವರ್ಷದಲ್ಲೇ ನೂರಾರು ಅಪರೂಪದ ರಾಗಗಳ ಬಗ್ಗೆ ತಮ್ಮ ಜ್ಞಾನವನ್ನು ತೋರಿಸಿದ ಬಾಲಪ್ರತಿಭೆ. ಅವರ ಪ್ರಾರಂಭದ ಸಂಗೀತ ಶಿಕ್ಷಣ ತಾಯಿಯವರಲ್ಲಿ. ಮುಂದೆ ಚೆನ್ನೈನ ಕರ್ನಾಟಿಕ್ ಮ್ಯೂಸಿಕ್ ಕಾಲೇಜಿನಲ್ಲಿ ಚಿನ್ನದ ಪದಕ ಪಡೆದು ನಂತರ ವಿದ್ವಾನ್ ಡಿ ಕೆ ಜಯರಾಮನ್ ಹಾಗೂ ಡಿ ಕೆ ಪಟ್ಟಮ್ಮಾಳ್ ಬಳಿಯಲ್ಲಿ ಶಿಕ್ಷಣ ಪಡೆದರು. ವಿಜಯ ಶಿವ ಅವರು ಮೃದಂಗವಾದನದಲ್ಲೂ ಪರಿಣಿತರು. ಕುಂಭಕೋಣಂ ರಾಜಪ್ಪ ಅಯ್ಯರ್ ಅವರ ಮೃದಂಗದ ಗುರುಗಳು.

ಪಾಂಡಿತ್ಯ, ಪ್ರೌಢಿಮೆ, ಸಂಗೀತಾತ್ಮಕತೆಗೆ ಹೆಸರಾಗಿರುವ ಅವರು ಕಾರ್ಯಕ್ರಮ ನೀಡದ ಸಭೆಗಳಿಲ್ಲ. ಅಮೆರಿಕಾ, ಕೆನಡಾ, ಸಿಂಗಪುರ್ ಹೀಗೆ ಹಲವಾರು ದೇಶಗಳಲ್ಲಿ ಅವರ ಕಾರ್ಯಕ್ರಮಗಳು ನಡೆದಿವೆ. ರಾಜಾಜಿ ತಂಬೂರವೂ ಸೇರಿದಂತೆ ನೂರಾರು ಪ್ರಶಸ್ತಿ ಬಹುಮಾನಗಳನ್ನು ಅವರು ಪಡೆದಿದ್ದಾರೆ. ಇಸೈ ಪೇರೊಲಿ, ಕಲ್ಕಿ ಕೃಷ್ಣಮೂರ್ತಿ ಪ್ರಶಸ್ತಿ, ಮೊದಲಾದ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ. 'ಸಂಗೀತವನ್ನು ಪ್ರೋತ್ಸಾಹಿಸಲು ಪ್ರಯತ್ನಿಸಬೇಡಿ, ನಿಷ್ಠೆಯಿಂದ ಅದರ ಸೇವೆ ಮಾಡಿ, ಅದು ನಿಮ್ಮನ್ನು ಪೋಷಿಸುತ್ತದೆ' ಎಂದು ಅಚಲವಾಗಿ ನಂಬಿರುವ ಅವರು ಸಂಗೀತ ಸೇವೆಗೆ ತಮ್ಮ ಬದುಕನ್ನು ಸಮರ್ಪಿಸಿಕೊಂಡಿದ್ದಾರೆ.





ಸಂಜೆ 5:30ರಿಂದ 6:45 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಇಂದ್ರಕೀಲ ಪ್ರಸಂಗ
ವಾಚನಕಾರರು : ವಿದುಷಿ ಲಕ್ಷ್ಮೀ ಜಯಪ್ರಕಾಶ್. ತುಮಕೂರು
ವ್ಯಾಖ್ಯಾನಕಾರರು : ಜಿ ಎಸ್ ಶ್ರೀನಿವಾಸಮೂರ್ತಿ. ತುಮಕೂರು

**ಸಂಜೆ 6:45ಕ್ಕೆ**

ವಿದುಷಿ ಡಾ. ಪಂತುಲ ರಮಾ–ಗಾಯನ
ವಿದ್ವಾನ್ ಮುಟ್ನೇರಿ ಶ್ರೀನಿವಾಸ ನರಸಿಂಹಮೂರ್ತಿ-ವಯೋಲಿನ್
ವಿದ್ವಾನ್ ತುಮಕೂರು ಬಿ ರವಿಶಂಕರ್– ಮೃದಂಗ
ವಿದ್ವಾನ್ ವ್ಯಾಸ ವಿಠಲ–ಖಂಜಿರ

**6 : 45 p.m.**

Vidushi Dr. Pantula Rama?- Vocal
Vidwan Mutnery Srinivas Narasimha Murthy- Violin
Vidwan Tumkur B. Ravishankar? Mridangam
Vidwan Vyasa Vittala-Khanjeera



ಸಂಗೀತದ ಮನೆತನದಲ್ಲಿ ಜನಿಸಿದ ಪಂತುಲ ರಮಾ ತಮ್ಮ ತಂದೆ ಪಂತುಲ ಗೋಪಾಲರಾವ್ ಅವರಲ್ಲಿ ಸಂಗೀತ ಶಿಕ್ಷಣವನ್ನು ಪ್ರಾರಂಭಿಸಿ, ನಂತರ ಸಂಗೀತ ಕಲಾಸಾಗರ ವಿಜಯೇಶ್ವರ ರಾವ್ ಅವರಲ್ಲಿ ಉನ್ನತ ಶಿಕ್ಷಣ ಪಡೆದರು. ತಮ್ಮ ಎಂಟನೆಯ ವರ್ಷದಿಂದ ಕಾರ್ಯಕ್ರಮ ನೀಡಲು ಪ್ರಾರಂಭಿಸಿದ ರಮಾ, ದೇಶ ವಿದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಪಿಟೀಲಿನಲ್ಲೂ ಪರಿಣಿತಿ ಪಡೆದಿರುವ ಇವರು ಹಲವಾರು ಹಿರಿಯ ವಿದ್ವಾಂಸರಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಆಕಾಶವಾಣಿಯ ಎ ಟಾಪ್ ಕಲಾವಿದರರಾಗಿರುವ ರಮಾ ಪಿಟೀಲು ಹಾಗೂ ವಯೋಲಾಗಳಲ್ಲಿಯೂ ಬಿ ಹೈ ಕಲಾವಿದರು. 'ಎ ಸ್ಟಡಿ ಆಫ್ ಶೇಪಿಂಗ್ ಆಫ್ ಎನ್ ಐಡಿಯಲ್ ಮ್ಯೂಸಿಷಿಯನ್ ಥ್ರೂ ಸಾಧನ' ಎಂಬ ವಿಷಯದಲ್ಲಿ ಪಿಎಚ್‌ಡಿ ಪಡೆದಿದ್ದಾರೆ. ಹಲವು ಪ್ರತಿಷ್ಠಿತ ಸಭೆಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ.

## ಆಗಸ್ಟ್ ಮಂಗಳವಾರ 29 AUGUST TUESDAY

ಸಂಜೆ 5:30ರಿಂದ 6:45 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಪಾಶುಪತಾಸ್ತ್ರ ಪ್ರಧಾನ–1
ವಾಚನಕಾರರು : ವಿದ್ವಾನ್ ಕೃ ರಾಮಚಂದ್ರ, ಮೈಸೂರು
ವ್ಯಾಖ್ಯಾನಕಾರರು : ಡಾ. ಜ್ಯೋತಿ ಶಂಕರ್, ಮೈಸೂರು

**ಸಂಜೆ 6:45ಕ್ಕೆ**
ಉಸ್ತಾದ್ ಫಯಾಜ್ ಖಾನ್– ಹಿಂದುಸ್ತಾನಿ ಗಾಯನ
ಪಂಡಿತ್ ದೀಪಕ್ ಮರಾಠೆ– ಹಾರ್ಮೋನಿಯಂ
ಪಂಡಿತ್ ರವೀಂದ್ರ ಯಾವಗಲ್– ತಬಲಾ

**6 : 45 p.m.**
Ustad Fayaz Khan-Hindustani Vocal
Pandit Deepak  Marathe-Harmonium
Pandith Ravindra Yavagal-Tabla



ಫಯಾಜ್ ಖಾನ್ ಅವರದ್ದು ಒಂದು ದೊಡ್ಡ ಸಂಗೀತದ ಪರಂಪರೆ. ಅದರಲ್ಲಿ ಇವರದ್ದು ಎಂಟನೆಯ ತಲೆಮಾರು. ತಾತ ಮೈಸೂರು ಆಸ್ಥಾನದಲ್ಲಿ ಹಾಗೂ ಹೈದರಾಬಾದಿನ ನವಾಬರಲ್ಲಿ ಪ್ರಖ್ಯಾತ ಸಾರಂಗಿ ವಾದಕರಾಗಿದ್ದರು. ತಬಲಾ, ಸಾರಂಗಿ ಹಾಗೂ ಗಾಯನ ಮೂರನ್ನು ಪ್ರೀತಿಸುವ ಉಸ್ತಾದ್ ಫಯಾಜ್ ಖಾನ್ ಆರನೇ ವರ್ಷದಲ್ಲಿ ಪಂಡಿತ್ ಬಸವರಾಜ ಬೆಂಡಿಗೇರಿಯವರಿಂದ ತಬಲಾ ವ್ಯಾಮೋಹ ಹತ್ತಿಸಿಕೊಂಡರು. ಪಂಡಿತ್ ರಾಮ ನಾರಾಯಣ್ ಅವರಲ್ಲಿ ಸಾರಂಗಿ ಶಿಕ್ಷಣ ಪಡೆದ ಭಾಗ್ಯ ಇವರದ್ದು. ಪಂಡಿತ್ ರಂಗನಾಥ್ ರಾವ್ ಜೋಷಿಯವರಲ್ಲಿ ಗಾಯನ ಶಿಕ್ಷಣ ಪಡೆದರು. ಗಾಯನದಲ್ಲಿ ಪ್ರಖ್ಯಾತರಾಗಿರುವ ಇವರು ಇಂದು ಬಹುಬೇಡಿಕೆಯ ಕಲಾವಿದರು.
ಅಪಘಾತದಲ್ಲಿ ಪತ್ನಿಯನ್ನು ಕಳೆದುಕೊಂಡ ಇವರು, ಅಳಿದ ಪತ್ನಿಯ ಹೆಸರಿನಲ್ಲಿ 'ಪರ್ವೀನ್ ಬೇಗಂ ಸಂಗೀತ ಶಿಕ್ಷಣ ಟ್ರಸ್ಟ್' ಪ್ರಾರಂಭಿಸಿದ್ದಾರೆ. ಇದು ಯುವ ಪ್ರತಿಭೆಗಳಿಗೆ ದೇಶ ವಿದೇಶಗಳಲ್ಲಿ ವೇದಿಕೆ ಒದಗಿಸಿಕೊಟ್ಟು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ. ಒಳ್ಳೆಯ ಗುರುಗಳು ಆಗಿ ಹೆಸರು ಮಾಡಿದ್ದಾರೆ. ಹಲವು ಭರವಸೆ ಮೂಡಿಸುವ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಬೆಳೆಯುತ್ತಿದಾರೆ.
ಸಾರಂಗಿಯಲ್ಲೂ ಅಪಾರ ಸಾಧನೆ ಮಾಡಿರುವ ಇವರು ಹಲವು ಕಾರ್ಯಕ್ರಮ ನೀಡಿದ್ದಾರೆ. ಸಿನಿಮಾದಲ್ಲಿ ಎ ಆರ್ ರೆಹಮಾನ್ ಜೊತೆ ಸಾರಂಗಿ ನುಡಿಸಿದ್ದಾರೆ. ಸಿನಿಮಾ ಕ್ಷೇತ್ರದಲ್ಲೂ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.



## ಆಗಸ್ಟ್ ಬುಧವಾರ 30 AUGUST WEDNESDAY

ಸಂಜೆ 5:30ರಿಂದ 6:45 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಪಾಶುಪತಾಸ್ತ್ರ ಪ್ರಧಾನ–2
ವಾಚನಕಾರರು : ಕುಮಾರಿ ಮಹಿಮಾ ಕಶ್ಯಪ್
ವ್ಯಾಖ್ಯಾನಕಾರರು : ಪ್ರೊ ಮೊರಬದ ಮಲ್ಲಿಕಾರ್ಜುನ, ಮೈಸೂರು

**ಸಂಜೆ 6:45ಕ್ಕೆ**
ವಿದ್ವಾನ್ ಸಿಕ್ಕಿಲ್ ಸಿ ಗುರುಚರಣ್– ಗಾಯನ
ವಿದ್ವಾನ್ ಮತ್ತೂರು ಶ್ರೀನಿಧಿ– ವಯೋಲಿನ್
ಪದ್ಮವಿಭೂಷಣ ಉಮಯಾಲಪುರಂ ಸಿವರಾಮನ್– ಮೃದಂಗ
ವಿದ್ವಾನ್ ಗಿರಿಧರ ಉಡುಪ– ಘಟ

**6 : 45 p.m.**
Vidwan Sikkil Gurucharan - Vocal
Vidwan Mattur Srinidhi - Violin
Padma Vibhushan Vidwan Umayalapuram K Sivaraman - Mridangam
Vidwan Giridhara Udupa - Ghatam



ಸಿಕ್ಕಿಲ್ ಗುರುಚರಣ್ ಇಂದು ಕರ್ನಾಟಕ ಸಂಗೀತದಲ್ಲಿ ಮುಂಚೂಣಿಯಲ್ಲಿರುವ ಯುವ ಸಂಗೀತಗಾರ. ಪ್ರಖ್ಯಾತ ಕೊಳಲು ವಾದಕಿ ಸಿಕ್ಕಿಲ್ ಕುಂಜುಮಣಿಯವರ ಮೊಮ್ಮಗ. ವಿದ್ವಾನ್ ಜ್ಞಾನ ಸ್ಕಂದನ್ ಬಳಿಯಲ್ಲಿ ಸಂಗೀತ ಕಲಿತ ಇವರು ಈಗ ವಿದ್ವಾನ್ ಬಿ ಕೃಷ್ಣಮೂರ್ತಿಯವರಲ್ಲಿ ಕಲಿಕೆ ಮುಂದುವರೆಸಿದ್ದಾರೆ. ಅಕಾಶವಾಣಿಯ 'ಎ' ಶ್ರೇಣಿ ಕಲಾವಿದರಾಗಿರುವ ಗುರುಚರಣ್ ಇಂಡಿಯಾ ಟುಡೆ ಪತ್ರಿಕೆಯು ಆಯ್ಕೆ ಮಾಡಿದ ಮುವತ್ತೈದು ವರ್ಷದೊಳಗಿನ ಪ್ರತಿಭೆಗಳಲ್ಲಿ ಒಬ್ಬರು. ಮ್ಯೂಸಿಕ್ ಅಕಾಡೆಮಿ, ಶಣ್ಮುಗಾನಂದ ಸಭಾ ಸೇರಿದಂತೆ ಎಲ್ಲಾ ಪ್ರಮುಖ ಸಭೆಗಳಲ್ಲೂ ಇವರ ಕಾರ್ಯಕ್ರಮ ನಡೆದಿದೆ. ಹಾಗೆಯೇ ಸಂಗೀತ ನಾಟಕ ಅಕಾಡೆಮಿ, ರಬೀಂದ್ರ ಉತ್ಸವದಲ್ಲೂ ಕಾರ್ಯಕ್ರಮ ನೀಡಿದ್ದಾರೆ.  ಸಿಂಗಪುರ, ಅಮೆರಿಕಾ, ಸಿಯೋಲ್ ಮೊದಲಾದ ಹಲವು ದೇಶಗಳಲ್ಲಿ ಇವರ ಕಾರ್ಯಕ್ರಮಗಳು ನಡೆದಿವೆ.

ಸಾಂಪ್ರದಾಯಿಕ ಶೈಲಿಯ ಕಾರ್ಯಕ್ರಮ ನೀಡುವುದರ ಜೊತೆಗೆ ಪಿಯಾನೋವಾದಕ ಅನಿಲ್ ಶ್ರೀನಿವಾಸನ್ ಜೊತೆ ನವೀನವಾದ ಕಾರ್ಯಕ್ರಮ ನೀಡಿದ್ದಾರೆ. ಅದು ತುಂಬಾ ಯಶಸ್ವಿಯಾಗಿದ್ದು ಜಾನ್ ಮ್ಯಾಕ್‌ಲಾಗ್ಲಿನ್ ಅದನ್ನು ಅದ್ಭುತ ಅನುಭವ ಎಂದು ಹೊಗಳಿದ್ದಾರೆ.

## ಆಗಸ್ಟ್ ಗುರುವಾರ 31 AUGUST THURSDAY

ಸಂಜೆ 5:30ರಿಂದ 6:45 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಊರ್ವಶೀ ಪ್ರಸಂಗ
ವಾಚನಕಾರರು : ವಿದುಷಿ ಸುಕನ್ಯಾ ವಿಜಯಕುಮಾರ್
ವ್ಯಾಖ್ಯಾನಕಾರರು : ಶ್ರೀಮತಿ ಶಾಂತಾ ಗೋಪಾಲ್ ಎಚ್ ಎಸ್

**ಸಂಜೆ 6:45ಕ್ಕೆ**

ವಿದ್ವಾನ್ ಸಾಕೇತ ರಾಮನ್–ಗಾಯನ
ವಿದ್ವಾನ್ ವಿಠಲ ರಂಗನ್– ವಯೋಲಿನ್
ಪದ್ಮ ವಿಭೂಷಣ ವಿದ್ವಾನ್ ಉಮಯಾಲಪುರಂ ಸಿವರಾಮನ್– ಮೃದಂಗ
ವಿದ್ವಾನ್ ಗುರುಪ್ರಸನ್ನ– ಖಂಜಿರ

**6 : 45 p.m.**

Vidwan Saketa Raman -Vocal
Vidwan Vittal Rangan -Violin
Vidwan Padma Vibhushana Umayalapuram K Sivaraman -Mridangam
Vidwan Guruprasanna-Khanjeera



ಸಾಕೇತರಾಮನ್, ಲಾಲ್ಗುಡಿ ಜಯರಾಮನ್ ಅವರಲ್ಲಿ ಶಿಷ್ಯವೃತ್ತಿ ಮಾಡಿ ಅವರ ಬಾನಿಯನ್ನು ಮೈಗೂಡಿಸಿಕೊಂಡಿರುವ ಯುವ ಕಲಾವಿದ. ಆಕಾಶವಾಣಿಯ ಎ ದರ್ಜೆ ಕಲಾವಿದರಾಗಿರುವ ಇವರು ಆರನೆಯ ವರ್ಷದಲ್ಲೇ ಶ್ರೀರಂಗಂ ಕೃಷ್ಣಮೂರ್ತಿಯವರಲ್ಲಿ ಸಂಗೀತ ಕಲಿಯಲು ಪ್ರಾರಂಭಿಸಿದರು. ಲಯಜ್ಞಾನದ ಮಹತ್ವವನ್ನು ಗ್ರಹಿಸಿದ ಇವರು ಮೃದಂಗವನ್ನು ಜೊತೆಯಲ್ಲೇ ಕಲಿತರು. ಸಾಫ್ಟ್‌ವೇರ್ ಇಂಜಿನಿಯರಿಂಗ್ ಪದವೀಧರರಾದ ಇವರು ಮಲ್ಟಿನ್ಯಾಷನಲ್ ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್ ಕಂಪೆನಿಯೊಂದರಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಪ್ಯಾರಿಸ್, ಲಂಡನ್, ಸಿಡ್ನಿ, ದುಬೈ ಹೀಗೆ ಜಗತ್ತಿನಾದ್ಯಂತ ಕಾರ್ಯಕ್ರಮ ನೀಡಿದ್ದಾರೆ. ತ್ರಿಸ್ಥಾಯಿಯಲ್ಲಿ ಸಲೀಸಾಗಿ ಸಂಚರಿಸುವ ಶಾರೀರ, ಭಾವಪೂರ್ಣ ಸಂಗೀತ, ಕಲಾತ್ಮಕ ಸ್ವರವಿನ್ಯಾಸದಿಂದ ಪಂಡಿತ ಪಾಮರರ ಮೆಚ್ಚುಗೆ ಗಳಿಸಿದ್ದಾರೆ. ಸತತವಾಗಿ ಮೂರು ಬಾರಿ ಮ್ಯೂಸಿಕ್ ಅಕಾಡೆಮಿಯ ಅತ್ಯುತ್ತಮ ಗಾಯಕ ಪ್ರಶಸ್ತಿಯೂ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ.



## ಸೆಪ್ಟೆಂಬರ್ ಶುಕ್ರವಾರ 01 SEPTEMBER FRIDAY

ಸಂಜೆ 5:30ರಿಂದ 6:45 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಭೀಮಾಂಜನೇಯ ಸಮಾಗಮ
ವಾಚನಕಾರರು : ವಿದುಷಿ ಸಂಧ್ಯಾ ರಮೇಶ್, ಮೈಸೂರು
ವ್ಯಾಖ್ಯಾನಕಾರರು : ಶ್ರೀ ನಾರಾಯಣ ದೇಸಾಯಿ, ಮೈಸೂರು

**ಸಂಜೆ 6:45ಕ್ಕೆ**

ಪಂಡಿತ್ ರಾಜೀವ್ ತಾರಾನಾಥ್– ಸರೋದ್
ಪಂಡಿತ್ ಉದಯರಾಜ ಕರ್ಪೂರ್– ತಬಲಾ

**6 : 45 p.m.**

Pandit Rajeev Taranath - Sarod
Pandith Udayaraj Karpur -Tabla



ಅಂತರ್ರಾಷ್ಟ್ರೀಯ ಖ್ಯಾತಿಯ ಪಂಡಿತ್ ರಾಜೀವ್ ತಾರಾನಾಥ್ ಅವರು ಈ ನಾಡಿನ ಹಾಗೂ ವಿಶ್ವದ ಅಗ್ರಗಣ್ಯ ಸರೋದ್‌ವಾದಕರು. ಮೈಹರ್ ಘರಾನೆಯ ಅತಿ ಹಿರಿಯ ಸರೋದ್‌ವಾದಕರು ಹಾಗೂ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಶೈಲಿಯ ನಿಷ್ಠಾವಂತ ಪ್ರತಿಪಾದಕರು. ಪರಿಪೂರ್ಣವಾದ ಸ್ವರಕ್ಕಾಗಿ ನಿರಂತರ ಶೋಧದಲ್ಲಿ ತೊಡಗುತ್ತಾ, ಈ ಪರಿಪೂರ್ಣತೆಯನ್ನೇ ಆರಾಧಿಸುತ್ತಾ, ಅದರಲ್ಲೇ ಸುಖಕಂಡವರು ಅವರು. ಅವರ ಮೀಟಿನ ಪ್ರತಿಸ್ವರವೂ ಆಳವಾದ ಹಂಬಲಿಕೆಯ, ಮಧುರನಾದದ ಜಾಡನ್ನು ನಮ್ಮಲ್ಲಿ ಉಳಿಸುತ್ತದೆ. ಚಿಂತನೆ ಮತ್ತು ಮನೋಧರ್ಮದ ಪ್ರೌಢಿಮೆಯಲ್ಲಿ ತಮ್ಮ ಸಮಕಾಲೀನ ಸರೋದ್‌ವಾದಕರಿಗಿಂತ ಬಹಳ ಪ್ರತ್ಯೇಕವಾಗಿ ಮತ್ತು ಅತ್ಯಂತ ಎತ್ತರದಲ್ಲಿ ನಿಲ್ಲುವ ಇವರು ಈ ಕಾಲದ ಒಬ್ಬ ಶ್ರೇಷ್ಠ ಕಲಾತಪಸ್ವಿ. ಅಧ್ಯಾಪನದ ಮೂಲಕ ಮೈಹರ್ ಘರಾನೆ ಮತ್ತು ಅದರ ದೊಡ್ಡ ಸಂಗೀತವನ್ನು ಉಳಿಸಿ ಪರಂಪರೆಯನ್ನು ಬೆಳೆಸಬೇಕೆಂಬ ಆ ಘರಾನದ ಉತ್ಸುಕತೆ ಮತ್ತು ಬದ್ಧತೆಯನ್ನೂ ಮೈಗೂಡಿಸಿಕೊಂಡಿರುವ ಇವರು ನಮ್ಮ ನಡುವಿನ ಅತ್ಯಂತ ಮೇಧಾವಿ ಹಾಗೂ ಸೃಜನಶೀಲ ಗುರುಗಳು ಕೂಡ.

ಗಾಯನ ಸಮಾಜದ ಸಂಗೀತ ಕಲಾರತ್ನ, ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ, ಕರ್ನಾಟಕ ಸರ್ಕಾರದ ಸಂಗೀತರತ್ನ ಟಿ ಚೌಡಯ್ಯ ಪ್ರಶಸ್ತಿ, ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಹಲವಾರು ಸಿನಿಮಾಗಳಲ್ಲಿ ಇವರು ನೀಡಿರುವ ಸಂಗೀತಕ್ಕೆ ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಬಂದಿವೆ. ತಂದೆ ಪಂಡಿತ್ ತಾರಾನಾಥರ ನೆನಪಿನಲ್ಲಿ ಒಂದು ಸಂಸ್ಥೆಯನ್ನು ಕಟ್ಟಿಕೊಂಡು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಸಂಘಟಿಸುತ್ತಾ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

## ಸೆಪ್ಟೆಂಬರ್ ಶನಿವಾರ 2 SEPTEMBER SATURDAY

ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ದೂರ್ವಾಸ ಆತಿಥ್ಯ
ವಾಚನಕಾರರು : ವಿದುಷಿ ನಾಗಶ್ರೀ ನಾಗೇಶ್, ಚನ್ನರಾಯಪಟ್ಟಣ
ವ್ಯಾಖ್ಯಾನಕಾರರು : ಪ್ರೊ ಶಿವಾಜಿ ಜೋಯಿಸ್, ಮೈಸೂರು

**ಸಂಜೆ 6:45ಕ್ಕೆ**
ವಿದ್ವಾನ್ ಟಿ ಎಂ ಕೃಷ್ಣ–ಗಾಯನ
ವಿದುಷಿ ಸಂಗೀತಾ ಶಿವಕುಮಾರ್– ಗಾಯನ
ವಿದ್ವಾನ್ ಆರ್ ಕೆ ಶ್ರೀರಾಂಕುಮಾರ್– ವಯೋಲಿನ್
ವಿದ್ವಾನ್ ವಿ ವಿ ರಮಣಮೂರ್ತಿ–ಮೃದಂಗ
ವಿದ್ವಾನ್ ಗುರುಪ್ರಸನ್ನ – ಖಂಜಿರ

**6 : 45 p.m.**
Vidwan T.M.Krishna-Vocal
Vidushi Sangeetha Sivakumar-Vocal
Vidwan R.K.Shriram Kumar-Violin
Vidwan V.V.Ramanamurthy - Mridangam
Vidwan Guruprasanna-Khanjeera





ವಿದ್ವಾನ್ ಟಿ ಎಂ ಕೃಷ್ಣ  ಕೇವಲ ಶ್ರೇಷ್ಠಮಟ್ಟದ ಸಂಗೀತಗಾರರಷ್ಟೇ ಅಲ್ಲ, ಸಂಗೀತವನ್ನು ಕುರಿತು ತಮ್ಮದೇ ಆದ ನಿಲುವನ್ನೂ ಹೊಂದಿದ್ದಾರೆ.  ಟಿ ಎಂ ಕೃಷ್ಣ ಅವರು ವಿದ್ವಾನ್ ಬಿ ಸೀತಾರಾಮ ಶರ್ಮ ಅವರಲ್ಲಿ ಸಂಗೀತ ಶಿಕ್ಷಣ ಪ್ರಾರಂಭಿಸಿ, ನಂತರ ರಾಗ–ತಾನ–ಪಲ್ಲವಿ ಕುರಿತಂತೆ ಚೆಂಗಲ್‌ಪೇಟ್ ರಂಗನಾಥನ್ ಅವರ ಬಳಿ ವಿಶೇಷ ತರಬೇತಿ ಪಡೆದರು. ನಂತರ ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರಲ್ಲಿ ಉನ್ನತ ಶಿಕ್ಷಣ ಪಡೆದರು. ದೇಶವಿದೇಶಗಳಲ್ಲಿ ತುಂಬಾ ಬೇಡಿಕೆಯಿರುವ ಈ ಕಲಾವಿದ ಸಾವಿರಾರು ಕಾರ್ಯಕ್ರಮಗಳನ್ನು, ಪ್ರಾತ್ಯಕ್ಷಿಕೆಗಳನ್ನು, ಭಾಷಣಗಳನ್ನು ನಡೆಸಿಕೊಟ್ಟಿದ್ದಾರೆ. ಅವರ ಕೃತಿ **ಸದರನ್ ಮ್ಯೂಸಿಕ್** ಸಂಗೀತ ಕ್ಷೇತ್ರದಲ್ಲಿ ಒಂದು ಅಲೆಯನ್ನೇ ಸೃಷ್ಟಿಸಿದೆ. ಸಂಗೀತದಲ್ಲೂ ನಿರಂತರ ಹುಡುಕಾಟ ನಡೆಸುತ್ತಿರುವ ಇವರು ತಮ್ಮ ಈ ಮಾರ್ಗದಲ್ಲಿ ತೊಡಕಾಗಬಹುದಾದ ಎಲ್ಲಾ ರೂಢಿಗತ ಆಚರಣೆಗಳನ್ನು ಪ್ರಶ್ನಿಸುತ್ತಾ ಸಾಗಿದ್ದಾರೆ. ಸಂಗೀತದಲ್ಲಿ ಕಾಣುತ್ತಿರುವ ಅಸಮಾನತೆಯ ಬಗ್ಗೆ ಮಾತನಾಡುತ್ತಲೇ ಸಂಗೀತವನ್ನು ಜನರ ನಡುವೆ ತೆಗೆದುಕೊಂಡು ಹೋಗಲು ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

ವಿದುಷಿ ಸಂಗೀತ ಶಿವಕುಮಾರ್ ಅವರು ಶ್ರೀ ಕೆ ಪಿ ವಾಸು ಹಾಗೂ ನಂತರ ಶ್ರೀಮತಿ ರಾಮಚಂದ್ರನ್ ಅವರ ಬಳಿ ಸಂಗೀತ ಕಲಿತರು. ಸಂಗೀತ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನ ಗಳಿಸಿರುವ ಇವರು ಪತಿ ಟಿ ಎಂ ಕೃಷ್ಣ ಅವರೊಂದಿಗೆ 'ಕಲಾಚಾರ ಮರುಮಲರ್ಚಿ ಟ್ರಸ್ಟ್' ಮಾಡಿಕೊಂಡು ತಮಿಳುನಾಡಿನ ದೇವಸ್ಥಾನಗಳಲ್ಲಿ ಸಂಗೀತವನ್ನು ಮತ್ತೆ ಚಾಲನೆಗೆ ತರುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.



## ಸೆಪ್ಟೆಂಬರ್ ಭಾನುವಾರ 3 SEPTEMBER SUNDAY

ಸಂಜೆ 5:30ರಿಂದ 6:30 ಕುಮಾರವ್ಯಾಸ ಭಾರತ ವಾಚನ
ವ್ಯಾಖ್ಯಾನ ವಿಷಯ : ಘೋಷಯಾತ್ರೆ, ಸೈಂಧವ ಪರಾಭವ, ಯಕ್ಷಪ್ರಶ್ನೆ
ವಾಚನಕಾರರು : ವಿದುಷಿ ಸುಮಾ ವಿಜಯ್, ಮೈಸೂರು
ವ್ಯಾಖ್ಯಾನಕಾರರು : ಶ್ರೀನಿವಾಸ ಫಣಿ, ಮೈಸೂರು

**ಸಂಜೆ 6:45ಕ್ಕೆ**
ವಿದ್ವಾನ್ ಎನ್ ರವಿಕಿರಣ್–ಚಿತ್ರವೀಣಾ
ವಿದ್ವಾನ್ ವಿಠಲ ರಂಗನ್ –ವಯೋಲಿನ್
ವಿದ್ವಾನ್ ವಿ ವಿ ರಮಣಮೂರ್ತಿ–ಮೃದಂಗ
ವಿದ್ವಾನ್ ಅರುಣ್‌ಕುಮಾರ್– ರಿದಂ ಪ್ಯಾಡ್

**6 : 45 p.m.**
Vidwan Ravi Kiran -Chitraveena
Vidwan Vittal Rangan-Violin
Vidwan V.V.Ramanamurthy-Mridangam
Vidwan Arun Kumar-Rhythm Pad



ಬಾಲಪ್ರತಿಭೆಯಾದ ರವಿಕಿರಣ್ ತಮ್ಮ ಮೂರನೇ ವರ್ಷದಲ್ಲೇ 350ಕ್ಕೂ ಹೆಚ್ಚು ರಾಗಗಳನ್ನು ಗುರುತಿಸಿ, ಐದನೇ ವರ್ಷದಲ್ಲಿ ಗಾಯನ ಕಛೇರಿ ಮಾಡಲು ಪ್ರಾರಂಭಿಸಿದರು. ತಂದೆ ಚಿತ್ರವೀಣಾ ನರಸಿಂಹನ್ ಅವರ ವಿಶಿಷ್ಟ ಮಾರ್ಗದರ್ಶನದಲ್ಲಿ ಎರಡು ವರ್ಷಗಳಲ್ಲಿ 500ಕ್ಕೂ ಹೆಚ್ಚು ಕೃತಿಗಳನ್ನು ಕಲಿತು ತಮ್ಮ ಕೃತಿಭಂಡಾರವನ್ನು ಶ್ರೀಮಂತಗೊಳಿಸಿಕೊಂಡರು. ಖ್ಯಾತ ಗಾಯಕಿ ಸಂಗೀತ ಕಲಾನಿಧಿ ಟಿ ಬೃಂದಮ್ಮ ಅವರಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಕಲಿತ ಹೆಗ್ಗಳಿಕೆ ಇವರದು. ಚಿತ್ರವೀಣಾ ಕಲಾವಿದರಾಗಿ, ಗಾಯಕರಾಗಿ, ಗುರುವಾಗಿ, ವಾಗ್ಗೇಯಕಾರನಾಗಿ ಇವರು ಪ್ರಖ್ಯಾತರು. ಭಾರತೀಯ ಮೆಲೋಡಿಕ್ ಹಾಗೂ ಪಾಶ್ಚಾತ್ಯ ಹಾರ್ಮೋನಿಕ್ ಶೈಲಿಯನ್ನು ಬೆಸೆಯುವ ಹೊಸ ಪರಿಕಲ್ಪನೆಯಲ್ಲಿ ಮೆಲ್‌ಹಾರ್ಮೋನಿಯನ್ನು ಸೃಷ್ಟಿಸಿದ್ದಾರೆ. ಎರಡನೆಯ ವರ್ಷದಲ್ಲೇ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಫೆಲೋ ಆದ ರವಿಕಿರಣ್ ಹಲವಾರು ಅಂತರ್‌ರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಪ್ರಶಸ್ತಿ, ಬಹುಮಾನಗಳನ್ನು ಪಡೆದಿದ್ದಾರೆ. ಇತ್ತೀಚೆಗೆ 1330 ತಿರುಕ್ಕುರಳ್ ಪದ್ಯಗಳಿಗೆ 16ಗಂಟೆಗಳಲ್ಲಿ ರಾಗಸಂಯೋಜನೆ ಮಾಡಿ ವಿಶಿಷ್ಟ ದಾಖಲೆ ಸ್ಥಾಪಿಸಿದ್ದಾರೆ. ಈ ವರ್ಷದ ಸಂಗೀತ ಕಲಾನಿಧಿ ಪ್ರಶಸ್ತಿಯೂ ಇವರಿಗೆ ದಕ್ಕಿದೆ.

# ಮನವಿ

ಮೈಸೂರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದೇ ಹೆಸರುವಾಸಿಯಾಗಿದೆ. ರಾಜಾಶ್ರಯದಿಂದಾಗಿ ಹಲವಾರು ಕಲೆಗಳು ಇಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಆದರೆ ಇಂದು ಕಲೆಯಬೀಡಿನಲ್ಲಿ, ಎಲ್ಲಾ ಕಲೆಗಳೂ, ಸಮೂಹ ಮಾಧ್ಯಮಗಳ ಪ್ರಭಾವದಿಂದಾಗಿ ಅವನತಿ ಹೊಂದುತ್ತಿವೆ. ಇಂಥ ಪರ್ವಕಾಲದಲ್ಲಿ, ರಾಜ್ಯಕ್ಕೆ, ಅಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೆ ಒಂದು ಅಸ್ಮಿತೆಯನ್ನು ನೀಡಿರುವ ಈ ಸಾಂಪ್ರದಾಯಿಕ ಅಭಿಜಾತ ಕಲೆಯ ಮಹಾನ್ ಪರಂಪರೆಯನ್ನು ಜತನವಾಗಿ ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ತಲುಪಿಸಬೇಕಾದ ಹೊಣೆಗಾರಿಕೆ ನಮ್ಮ ನಿಮ್ಮಂತಹ ಎಲ್ಲಾ ಸಂಗೀತ ಪ್ರೇಮಿಗಳ ಮೇಲಿದೆ.

ಎಸ್‌ಪಿವಿಜಿಎಂಸಿ ಟ್ರಸ್ಟ್ ಐವತ್ತನಾಲ್ಕು ವರ್ಷಗಳಿಂದ ಸಾಂಸ್ಕೃತಿಕ ಹರಿಕಾರನ ಹೊಣೆಗಾರಿಕೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದೆ. ಅಭಿಜಾತ ಸಂಗೀತವನ್ನು ಜನರತ್ತ ಸಮರ್ಥವಾಗಿ ಒಯ್ಯುವ ಒಂದು ಪ್ರಮುಖ ವೇದಿಕೆಯಾಗಿದೆ. ಕರ್ನಾಟಕ ಹಾಗೂ ಹಿಂದುಸ್ತಾನಿ ಸಂಗೀತದ ದಿಗ್ಗಜರೆಲ್ಲಾ ಈ ವೇದಿಕೆಯಲ್ಲಿ ಕಾರ್ಯಕ್ರಮ ನೀಡುತ್ತಾ ಬಂದಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕದ ಹಲವಾರು ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಈ ರೀತಿ ಹಲವು ಕಡೆಗಳಿಂದ ದೊರಕಿದ ಸಹಕಾರದಿಂದ ಈ ಸಂಸ್ಥೆಗೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗಿದೆ.

ಐವತ್ತೈದು ವರ್ಷಗಳ ನಿರಂತರ ಸೇವೆಯ ನಂತರ ಈ ವರ್ಷ 56ನೆಯ ಪಾರಂಪರಿಕ ಸಂಗೀತೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ವರ್ಷದಂತೆ ಹಿರಿಯ ಕಿರಿಯರೆಲ್ಲಾ ಒಟ್ಟಾಗಿ ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ನಿಮ್ಮಂತಹ ದಾನಿಗಳ ಕಲಾರಸಿಕರ ಔದಾರ್ಯವನ್ನು ನೆಚ್ಚಿಕೊಂಡೇ ನಮ್ಮ ಸಂಸ್ಥೆ ಇಷ್ಟು ವರ್ಷಗಳು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ನಿಮ್ಮ ಸಹಕಾರವನ್ನು ವಿಶ್ವಾಸಪೂರ್ವಕವಾಗಿ ನೆನೆಯುತ್ತಾ, ಮತ್ತೆ ತಾವೆಲ್ಲರೂ ಆರ್ಥಿಕ ಔದಾರ್ಯವನ್ನು ತೋರಿ ನಮ್ಮ ಸಂಸ್ಥೆಯನ್ನು ಮುಂದಕ್ಕೆ ನಡೆಸಿಕೊಂಡು ಹೋಗಿ, ಈ ನೆಲದ ಅಮೂಲ್ಯ ಕಲಾಪರಂಪರೆಯನ್ನು ಕಾಪಾಡುವ ನಿಟ್ಟಿನಲ್ಲಿ ತಮ್ಮ ಸಹಾಯಹಸ್ತ ಚಾಚಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇವೆ.


**Patron :**
K V Murthy
**President :**
R Vasudeva Murthy
**Vice President :**
M Laxminarayan

**Secretary :**
C R Himamshu
**Joint Secretary**
N Nagaraj
**Treasurer**
R Gururaj

**Trustees :**
Venugopal T S
Shylaja
Amaresh Das
Sridhar M K
Vasanth
C Chelyva